ಇಂದು ದಿನಾಂಕಃ **19.02.2021** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ ನಾನು ಎಂ.ಎ ಪದವೀಧರ. ಏನು ಕೆಲಸ ಮಾಡುತ್ತೀರ ಎಂದರೆ ನಾನು ಪ್ರೌಢಶಾಲೆಯಲ್ಲಿ ಗುಮಾಸ್ತನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಈಗ ನಿವೃತ್ತಿ ಹೊಂದಿರುತ್ತೇನೆ. ಮನೆಯಲ್ಲಿಯೇ ಇದ್ದೇನೆ. ನನ್ನ ತಂದೆಯ ಹೆಸರು ಬಿ.ಎನ್. ಕಾಳಾಚಾರಿ. ನನ್ನ ಮೂಲ ಊರು ಬಿಳಿಕೆರೆ. ನನ್ನ ತಂದೆಯವರ ಮೂಲ ಊರು ರಂಗಯ್ಯನಕೊಪ್ಪಲು. ಪ್ರಮಾಣ ಪತ್ರದಲ್ಲಿರುವ ವಿಚಾರಗಳು ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನೇ ಹೇಳಿ ಬರೆಸಿರುತ್ತೇನೆ. ದಾವೆಯನ್ನು ಯಾರು ಯಾರ ವಿರುದ್ದ ದಾಖಲಿಸಿದ್ದಾರೆಂದು ತಿಳಿದುಕೊಂಡಿದ್ದೀರ ಎಂದರೆ ಚಂದ್ರಶೇಖರಾಚಾರ್ ರವರು, ಗಂಗಾಧರಾಚಾರ್, ನನ್ನ ಮತ್ತು ಇತರರ ವಿರುದ್ದ ದಾಖಲಿಸಿರುತ್ತಾರೆ. ದಾವಾ ಸ್ವತ್ತಿನ ಸಂಖ್ಯೆ ಏನು ಎಂದರೆ ಹೌಸ್ ಲೀಸ್ಟ್ ನಂ. **31,** ಅದರ ವಿಸ್ತೀರ್ಣ **33*16 1/2** ಗಜ ಇರುತ್ತದೆ. ದಾವಾಸ್ವತ್ತಿನ ಹೌಸ್ ಲೀಸ್ಟ್ ನಂಬರ್ **31** ಎಂದು ಮಾತ್ರ ಇದೆಯೇ ಅಥವಾ ಹಿಸ್ಸೆಯಾಗಿದೆಯೇ ಎಂದರೆ ಅದು ಗೊತ್ತಿಲ್ಲ.

ಸಿದ್ದಾಚಾರಿಯವರು ಏನಾಗಬೇಕು ಎಂದರೆ ನನ್ನ ತಂದೆಗೆ ಅವರು ಮಾವನಾಗಬೇಕು. ನಾನು ಹೇಳುವಂತೆ ಸಿದ್ದಾಚರಿಯವರು ನನ್ನ ಸಂಬಂಧಿ ಅಲ್ಲ, ಅವರು ಕುಲಸ್ಥರು ಎಂದರೆ ಸಾಕ್ಷಿಯು ಸಂಬಂಧಿ ಮತ್ತು ಕುಲಸ್ಥರು ಎಂದು ಹೇಳುತ್ತಾರೆ. ದಾವಾ ಸ್ವತ್ತು ಸಿದ್ದಾಚಾರಿಯವರಿಗೆ ಹೇಗೆ ಬಂದಿರುತ್ತದೆ ಎಂದರೆ ಮಂಚಮ್ಮನವರು ಸಿದ್ದಾಚಾರಿಯವರನ್ನು ದತ್ತು ಪಡೆದಿದ್ದು, ಅವರ ಕಾಲಾನಂತರ ಸಿದ್ದಾಚಾರಿಯವರಿಗೆ ದಾವಾಸ್ತಿ ಬಂದಿರುತ್ತದೆ. ಸಿದ್ದಾಚಾರಿಯವರಿಗೆ ಬಿಳಿಕೆರೆಯಲ್ಲಿ ಮೂರು ಐಟಂ ಸ್ವತ್ತುಗಳು ಇದ್ದವು ಎಂದರೆ ಸರಿ. ಸದರಿ ಸ್ವತ್ತುಗಳ ಪೈಕಿ ಹೌಸ್ ಲೀಸ್ಟ್ ನಂಬರ್ **30/2** ರ ವಿಸ್ತೀರ್ಣ **22*16** ಗಜ ಎಂದರೆ ನನಗೆ ಅಷ್ಟಾಗಿ ಗೊತ್ತಿಲ್ಲ. ಹೌಸ್ ಲೀಸ್ಟ್ ನಂಬರ್ **31/1** ರ ವಿಸ್ತೀರ್ಣ **33*16** ಗಜ ಇತ್ತು ಎಂದರೆ ಈಗ್ಗೆ **80** ವರ್ಷಗಳ ಹಿಂದೆ ಇತ್ತು. ಹೌಸ್ ಲೀಸ್ಟ್ ನಂಬರ್ **31/2** ರ ವಿಸ್ತೀರ್ಣ **33*16** ಗಜ ಇತ್ತು, ಅವುಗಳು ಸಿದ್ದಾಚಾರಿ ಬಿನ್ ದೊಡ್ಡತಮ್ಮಯ್ಯಚಾರಿಯವರಿಗೆ ಸೇರಿದವಗಳಾಗಿರುತ್ತವೆ ಎಂದರೆ ಸರಿಯಲ್ಲ. ಹೌಸ್ ಲೀಸ್ಟ್ ನಂಬರ್ **31/2** ನಮಗೆ ಸೇರಿರುತ್ತದೆ. ಸದರಿ ಆಸ್ತಿ ನಿಮ್ಮ ತಂದೆಗೆ ಹೇಗೆ ಬಂದಿರುತ್ತದೆ ಎಂದರೆ ಅದು ನಮ್ಮ ತಂದೆಯ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಆ ಬಗ್ಗೆ ಯಾವುದಾದರು

ದಾಖಲೆಗಳನ್ನು ನ್ಯಾಕ್ಕೆ ಹಾಜರು ಮಾಡಿದ್ದೀರ ಎಂದರೆ ಮಾಡಿರುತ್ತೇನೆ. ನಾನು ಹೌಸ್ ಲೀಸ್ಟ್ ನಂಬರ್ 31/2 ಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಸಲ್ಲಿಸಿದ್ದೇನೆ ಎಂದು ವಾದಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಬಿಳಿಕೆರೆಯಲ್ಲಿ ಹಿಂದೆ ಪಟೇಲರು ಮತ್ತು ಶಾನುಭೋಗರು ಇದ್ದರು ಎಂದರೆ ಸರಿ. ಸದರಿಯವರುಗಳು ಬಿಳಿಕೆರೆಗೆ ಸಂಬಂಧಿಸಿದ ಆಸ್ತಿಗಳ ದಾಖಲೆಗಳನ್ನು ಇಡುತ್ತಿದ್ದರು ಎಂದರೆ ಸರಿ. ಸ್ವತ್ತುಗಳಿಗೆ ಸಂಬಂಧಿಸಿದಂತೆ ಕಂದಾಯ ವಗೈರೆಗಳನ್ನು ಅವರೇ ಕಟ್ಟಿಸಿಕೊಳ್ಳುತ್ತಿದ್ದರು ಎಂದರೆ ಸರಿ. ಸದರಿಯವರುಗಳ ದಾಖಲೆಗಳ ಪ್ರಕಾರ ಹೌಸ್ ಲೀಸ್ಟ್ ಸಂ. 30/2 ರ ವಿಸ್ತೀರ್ಣ 22*16 ಗಜ ಸಿದ್ದಾಚಾರಿ ಬಿನ್ ದೊಡ್ಡತಮ್ಮಯ್ಯಚಾರಿಯವರಿಗೆ ಸೇರಿರುತ್ತದೆ ಎಂದರೆ ಸರಿ. ಅದೇ ರೀತಿ ಹೌಸ್ ಲೀಸ್ಟ್ ಸಂ. 31/1 ರ ವಿಸ್ತೀರ್ಣ 33*16 ಗಜ ಸಿದ್ದಾಚಾರಿ ಬಿನ್ ದೊಡ್ಡತಮ್ಮಯ್ಯಚಾರಿಯವರ ಹೆಸರಿನಲ್ಲಿತ್ತು ಎಂದರೆ ಸರಿ. ಅದೇ ರೀತಿ ಹೌಸ್ ಲೀಸ್ಟ್ ಸಂ. 31/2 ರ ವಿಸ್ತೀರ್ಣ 33*16 ಗಜ ಸಹ ಸಿದ್ದಾಚಾರಿ ಬಿನ್ ದೊಡ್ಡತಮ್ಮಯ್ಯಚಾರಿಯವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಸಂಪೂರ್ಣ ಮಾಹಿತಿ ಗೊತ್ತಿದ್ದರೂ ಸಹ ಮತ್ತು ನಿಪಿ 5 ರಲ್ಲಿ ನಮೂದಾಗಿರುವ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ದಾವಾ ಸ್ವತ್ತನ್ನು ನಾಳ್ಕನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದು ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಬಗ್ಗೆ ಯಾವುದಾದರು ದಾಖಲೆಯನ್ನು ನ್ಯಾಕ್ಕೆ ಸಲ್ಲಿಸಿದ್ದೀರ ಅಥವಾ ನೋಡಿದ್ದೀರ ಎಂದರೆ ನೋಡಿರುವುದಿಲ್ಲ. ಸದರಿ ದಾಖಲೆಯನು ನ್ಯಾಕ್ಕೆ ಹಾಜರು ಮಾಡಲು ತೊಂದರೆ ಇದೆಯೇ ಎಂದರೆ ತೊಂದರೆ ಇರುವುದಿಲ್ಲ. ದಾವಾ ಸ್ವತ್ತು ನನ್ನ ತಂದೆಗೆ ಮತ್ತು ನನಗೆ ಯಾವ ರೀತಿ ಬಂದಿರುತ್ತದೆ ಎಂದರೆ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ 62 ಅನ್ನು ನಾನೇ ಹಾಜರು ಮಾಡಿದ್ದೇನೆ ಎಂದರೆ ಸರಿ. ಅದರಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಚಿಕ್ಕಪ್ಪ ನಾಗರಾಜುರವರು ನನ್ನ ತಂದೆ ಕಾಳಾಚಾರಿಯವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಸ್ವತ್ತಿನ ಪಂಚಾಯಿತಿ ಜಂಜರ್ ನಂಬರ್ ಎಷ್ಟು ಎಂದರೆ 36 ಆಗಿರುತ್ತದೆ. ನ್ಯಾಯಾಲಯವನ್ನು ಗೊಂದಲಕ್ಕೀಡುವ ಮಾಡುವ ಉದ್ದೇಶದಿಂದ ಸದರಿ ಸ್ವತ್ತಿನ ಪಂಚಾಯಿತಿ ಜಂಜರ್ ನಂಬರ್ 36 ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 62 ರ ದಾಖಲೆಯಲ್ಲಿ ಪಂಚಾಯಿತಿ ಖಾತಾ ಸಂ. 1026 ಮತ್ತು ವಿಸ್ತೀರ್ಣ 22 1/2 * 7 1/2 ಗಜ ಎಂದು ನಮೂದಾಗಿರುತ್ತದೆ ಎಂದರೆ ನನ್ನ ತಾತನ

ಕಾಲದಲ್ಲಿ ಖಾತಾ ಸಂ. **1026** ಇರುತ್ತದೆ. ನಿಡಿ **62** ರಲ್ಲಿ ಹೊಸ ಮತ್ತು ಹಳೆಯ ಖಾತಾ ಸಂಖ್ಯೆಗಳನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ **62** ರಲ್ಲಿ ನಮೂದಿಸಿರುವ ಆಸ್ತಿಯನ್ನು ಯಾವಾಗ ಖರೀದಿ ಮಾಡಲಾಗಿರುತ್ತದೆ ಎಂದೆರ **40** ವರ್ಷಗಳ ಹಿಂದೆ ಖರೀದಿ ಮಾಡಲಾಗಿರುತ್ತದೆ. ನಿಖರವಾದ ತಾರೀಖು, ತಿಂಗಳು ಗೊತ್ತಿಲ್ಲ ಎಂದರೆ ಸರಿ. ಓಎಸ್ **97/2000** ದಾವೆಯಲ್ಲಿ ನಾನು ಪಕ್ಷಗಾರನಲ್ಲ ಎಂದರೆ ಸರಿ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.